<u>**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**</u>

<u>**Spl.C.109/2024**</u>

ದಿನಾಂಕ 13.03.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 1 ಪ್ರಾಸಾ -1

| | | |
|---|---|---|
| ಹೆಸರು | ಃ | ಸೋಮು |
| ತಂದೆಯ ಹೆಸರು | ಃ | ವೆಂಕಟಯ್ಯ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಅಣ್ಣಹಳ್ಳಿ, ರಾಮನಗರ |

<u>**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**</u>

ಚಾಸಾ 2 ರಿಂದ 4 ಶಿವಣ್ಣ ಶಂಕರ್ ಹೊಟ್ಟೆ ನಿಂಗಯ್ಯ ನನಗೆ ಗೊತ್ತು. ನಾನು ಪರಿಶಿಷ್ಟ ಜಾತಿ ಮಾದಿಗ ಜನಾಂಗಕ್ಕೆ ಸೇರಿದವನಾಗಿರುತೇನೆ. ಈ ಪ್ರಕರಣದ ಆರೋಪಿಗಳಾದ 1 ರಿಂದ 6 ನನಗೆ ಗೊತ್ತು. ಅವರೆಲ್ಲಾ ಒಕ್ಕಲಿಗ ಜಾತಿಗೆ ಸೇರಿದವರಾಗಿರುತ್ತಾರೆ. ಅವರಿಗೆ ನಾನು ಮಾದಿಗ ಆದಿ ಕರ್ನಾಟಕ ಜಾತಿಗೆ ಸೇರಿದವ ಎಂದು ಗೊತ್ತಿದೆ.

2. ದಿನಾಂಕ 01.04.2024 ರಂದು ಸಂಜೆ 6-6.30 ರ ಸಮಯದಲ್ಲಿ ಎರಡು ಗುಂಪುಗಳ ನಡುವೆ ಅಣ್ಣಹಳ್ಳಿ ಹಾಲಿನ ಡೈರಿಯ ಬಳಿ ತುಂಬಾ ಗಲಾಟೆ ನಡೆಯುತ್ತಿತ್ತು. ಶಿವಣ್ಣ ಎಂಬುವವರನ್ನು ನಾನು ನನ್ನ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಡೈರಿಯ ಬಳಿ ಬಂದಾಗ ಎರಡು ಗುಂಪಿನ ನಡುವೆ ಜೋರಾಗಿ ಗಲಾಟೆ ನಡೆಯುತ್ತಿತ್ತು. ಆಗ ನಾನು ನಿಮ್ಮದು ಏನೇ ಇದ್ದರೂ ಸಹ ಹಾಲು ಹಾಕಲು ದಾರಿ ಮಾಡಿಕೊಡಿ ಎಂದು ಹೇಳಿದೆ. ಆಗ 1ನೇ ಆರೋಪಿ ಲಕ್ಷ್ಮಣ ಅಲಿಯಾಸ್ ಬಿಳಿಯ ಏ ಸೂಳೆ ಮಗನೇ ಬೋಳಿ ಮಗನೇ ನೀನು ಯಾವನೋ

ಕೇಳೋಕೆ ಎಂದು ನನ್ನ ಕತ್ತಿನ ಪಟ್ಟಿ ಹಿಡಿದುಕೊಂಡು ಜೋರಾಗಿ ಎಳೆದ. ಆಗ ನನ್ನ ಷರ್ಟ್ ನನ ಗುಂಡಿ ಕಿತ್ತುತು. ಷರ್ಟ್ ನ್ನು ಎಳೆದು ಕಿತ್ತು ಹಾಕಿ ಕಪಾಳಕ್ಕೆ ಕೈಯಿಂದ ಹೊಡೆದ ಕೆಳಕ್ಕೆ ಕೆಡವಿದ. ಅರೋಪಿ ನಿತ್ಯಾನಂದ ಈ ನನ್ನ ಮಕ್ಕಳ ಹಾಲನ್ನು ಡೈರಿಗೆ ನಾವು ಯಾಕೆ ಹಾಕಿಸಿಕೊಳ್ಳಬೇಕು ಎಂದು ಹೇಳಿ ನನ್ನನ್ನು ಕೆಳಕ್ಕೆ ಉರುಳಿಸಿ ಕಾಲಲ್ಲಿ ಒದ್ದ. ಆಗ ಆರೋಪಿ ಚಂದ್ರಶೇಖರ ನೀನು ದೊಡ್ಡ ಲೀಡರ್ ಏನೋ ನಮ್ಮ ಊರಿಗೆ , ನೀನು ಎಸ್‌ಸಿ ಹೊಲೆಯ, ಮಾದಿಗ, ನಾವು ಮನಸ್ಸು ಮಾಡಿದರೆ ಪರಿಶಿಷ್ಟ ಜಾತಿಯವರ ಹಾಲನ್ನು ನಾವು ಡೈರಿಗೆ ಹಾಕಿಸುವುದಿಲ್ಲ, ನೀನು ಯಾರ ಹತ್ತಿರ ಹೋಗಿ ಹೇಳಿತ್ತೀಯಾ ಹೇಳಿಕೋ, ಏನು ಮಾಡಿಸುತ್ತೀಯಾ ಮಾಡಿಕೋ ಎಂದು ಬೈದ .

3. ಭೀಮಯ್ಯ, ನಾಗರಾಜು ಮತ್ತು ನಾಗಣ್ಣ ಸೇರಿಕೊಂಡು ಹೊಡಿರಿಲಾ ನನ್ನ ಮಗನಿಗೆ ಎಂದು ಕುಮ್ಮಕ್ಕು ಕೊಡುತ್ತಾ ಇದ್ದರು. ಶಿವಣ್ಣ ನನ್ನನ್ನು ಬಿಡಿಸಲು ಬಂದಾಗ ಆತನಿಗೂ ಸಹ ಆರೋಪಿಗಳು ಅವಾಚ್ಯ ಶಬ್ಧಗಳಿಂದ ಬೈದು ಜಾತಿ ನಿಂದನೆ ಮಾಡಿರುತ್ತಾರೆ. ಆಗ ಶಂಕರ್, ಶಿವಣ್ಣ, ಹಾಲಿನ ಡೈರಿಯ ಸೆಕ್ರೆಟರಿ ರಾಜ್ ಕುಮಾರ್ ಇವರೆಲ್ಲಾ ಸಮಾಧಾನ ಮಾಡಿದರು. ನನಗೆ ಏಟಾಗಿದ್ದ ಕಾರಣ ನಾನು ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಎರಡು ದಿನದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ದೂರು ಕೊಟ್ಟರು ಸಹ ಪೊಲೀಸರು ಎರಡು ದಿನಗಳ ಕಾಲ ಅದನ್ನು ನೊಂದಣಿ ಮಾಡಿಕೊಳ್ಳಲಿಲ್ಲ. ನಾನು ಕೊಟ್ಟಂತಹ ದೂರನ್ನು ನೋಡಿದರೆ ಗುರುತಿಸಬಲ್ಲೆ, ಸಾಕ್ಷಿ ಗುರುತಿಸಿದ ದೂರು ಮತ್ತು ಸಹಿ ಯನ್ನು ನಿಶಾನೆ ಪಿ 1 ಮತ್ತು ನಿಶಾನೆ ಪಿ 1(ಎ) ಎಂದು ಗುರುತಿಸಲಾಯಿತು.

4. ದಿನಾಂಕ 05.04.2024 ರಂದು ಬೆಳಿಗ್ಗೆ 11.45 ರ ಸಮಯದಲ್ಲಿ ಪೊಲೀಸರು ಘಟನೆ ನಡೆದ ಸ್ಥಳವಾದ ಹಾಲಿನ ಡೈರಿಯ ಬಳಿ ಬಂದು ಮಹಜರ್ ಮಾಡಿರುತ್ತಾರೆ. ಸದರಿ

ಸ್ಥ,ಳವನ್ನು ನಾನೇ ತೋರಿಸಿರುತ್ತೇನೆ. ಸದರಿ ಮಹಜರ್ ಮತ್ತು ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಮಹಜರ್ ಮತ್ತು ಸಹಿಯನ್ನು ನಿಶಾನೆ ಪಿ 2 ಮತ್ತು ನಿಶಾನೆ ಪಿ 2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋ ಸಹ ತೆಗೆದಿರುತ್ತಾರೆ. ಸಾಕ್ಷಿ ಗುರುತಿಸಿರುವ ಎರಡು ಫೋಟೋಗಳನ್ನು ನಿಶಾನೆ ಪಿ 3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಆರೋಪಿಗಳನ್ನು ನೋಡಿದರೆ ಸಹ ಗುರುತಿಸಬಲ್ಲೆ. (ಇಂದು ಆರೋಪಿಗಳ ಹಾಜರಾತಿಯನ್ನು ಮನ್ನ ಮಾಡಲು ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ.)

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ**
**ಶ್ರೀ.ಎಸ್.ಎನ್.ಆರ್ ವಕೀಲರ ಪರವಾಗಿ ಶ್ರೀಮತಿ ಸೌಜನ್ಯ ವಕೀಲರು ಸಮಯಾವಕಾಶ ಕೋರಿದ್ದು, ಆರೋಪಿ ಪರ ವಕೀಲರು ಬೆಂಗಳೂರಿನ ವಕೀಲರಾಗಿದ್ದು, ಅವರು ಸಮಯಾವಕಾಶ ಕೋರಲು ಕೇಳಿಕೊಂಡಿರುತ್ತಾರೆ ಎಂದು ನಿವೇದಿಸಿಕೊಂಡಿದ್ದು. ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**